# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 546 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 20-02-2023 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ಇರುವ ಸ್ಥಾಪಿತ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಎಷ್ಟು; ಪ್ರಸ್ತುತ ಎಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿದೆ; (ಕಳೆದ 3 ವರ್ಷಗಳ ವಿವರ ನೀಡುವುದು) | ರಾಜ್ಯದಲ್ಲಿ ಪ್ರಸ್ತುತ ಫೆಬ್ರವರಿ-2023 ರ ಮಾಹೆಯಲ್ಲಿ ವಿದ್ಯುತ್ ಉತ್ಪಾದನಾ ಸ್ಥಾಪಿತ ಸಾಮರ್ಥ್ಯವು 31201 ಮೆ.ವ್ಯಾ ಗಳಾಗಿರುತ್ತದೆ.<br>ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ವಿವಿಧ ಮೂಲಗಳಿಂದ ಲಭ್ಯವಾದ ವಿದ್ಯುತ್ತಿನ ಪ್ರಮಾಣದ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. |
| ಆ) | ಕರ್ನಾಟಕ ರಾಜ್ಯದಲ್ಲಿ ವಾರ್ಷಿಕವಾಗಿ ಬೇಡಿಕೆಯಿರುವ ವಿದ್ಯುತ್ ಎಷ್ಟು; ಲಭ್ಯತೆ ಎಷ್ಟು; ಬೇಡಿಕೆ ಗಮನಿಸಿದಾಗ ಕೊರತೆಯಿದೆಯೇ; ಕೊರತೆಯಿದ್ದರೆ ಹೇಗೆ ಸರಿದೂಗಿಸಲಾಗುತ್ತಿದೆ; (ವಿವರ ನೀಡುವುದು) | ರಾಜ್ಯದಲ್ಲಿ 2022-23ರ ಸಾಲಿನಲ್ಲಿ ಅಂದಾಜಿಸಲಾದ ಬೇಡಿಕೆ ಯಿರುವ ವಿದ್ಯುತ್ ಪ್ರಮಾಣ 86126 ಮಿ.ಯೂ ಗಳಿದ್ದು, ದಿನವಹಿ ಸರಾಸರಿ ಬೇಡಿಕೆ ಪರಿಮಾಣವು 235.96 ಮಿ.ಯೂ ಗಳಾಗಿರುತ್ತದೆ.<br>ಪ್ರಸ್ತುತ ರಾಜ್ಯದಲ್ಲಿ ಬೇಡಿಕೆಗೆ ಸೀಮಿತವಾಗಿ ವಿದ್ಯುತ್ ಉತ್ಪಾದನೆಯಾಗುತ್ತಿದ್ದು, ಯಾವುದೇ ಕೊರತೆ ಇರುವುದಿಲ್ಲ.<br>ರಾಜ್ಯದಲ್ಲಿನ ವಿದ್ಯುತ್ ಉಷ್ಣಸ್ಥಾವರಗಳು ಮತ್ತು ಕೇಂದ್ರ ವಿದ್ಯುತ್ ಉಷ್ಣಸ್ಥಾವರಗಳ ಮೂಲಗಳಿಂದ ವಿದ್ಯುತ್ ಪೂರೈಕೆಯಲ್ಲಿ ತಾಂತ್ರಿಕ ಕಾರಣಗಳಿಂದಾಗಿ ಅನಿರೀಕ್ಷಿತವಾಗಿ ಕಡಿತಗೊಂಡಾಗ ರಾಜ್ಯದ ವಿದ್ಯುತ್ ಬೇಡಿಕೆಯನ್ನು ಪೂರೈಸಲು ವಿದ್ಯುತ್ ವಿನಿಮಯ ಕೇಂದ್ರಗಳಲ್ಲಿ ವಿದ್ಯುತ್ತನ್ನು ಖರೀದಿ ಮಾಡಲಾಗುತ್ತದೆ. |
| ಇ) | ಕರ್ನಾಟಕದಲ್ಲಿ ಕೃಷಿ ಪಂಪ್‌ಸೆಟ್ಟುಗಳಿಗೆ ಯಾವ ಯಾವ ಬಳಕೆಗೆ ವಿದ್ಯುತನ್ನು ಉಚಿತವಾಗಿ ನೀಡಲಾಗುತ್ತಿದೆ; ಉಚಿತ ವಿದ್ಯುತ್ ನೀಡುವ ಮಾನದಂಡಗಳೇನು; ಒಟ್ಟು ಎಷ್ಟು ವಿದ್ಯುತ್ ಉಚಿತವಾಗಿ ನೀಡಲ್ಪಡುತ್ತಿದೆ; ಉಚಿತ ವಿದ್ಯುತ್ತಿನ ಕಂದಾಯ ನಷ್ಟವನ್ನು ಸರ್ಕಾರ ಭರಿಸಿದೆಯೇ; (ಬಳಕೆವಾರು 3 ವರ್ಷಗಳ ಅವಧಿಗೆ ವಿವರ ನೀಡುವುದು) | ಸರ್ಕಾರಿ ಆದೇಶ ಸಂಖ್ಯೆ: ಇ ಎನ್ 55 ಪಿ ಎಸ್ ಆರ್ 2008 ದಿನಾಂಕ 04.09.2008 ರಂತೆ ದಿನಾಂಕ 01.08.2008 ರಿಂದ ರೈತರ 10 ಹೆಚ್.ಪಿ ವರೆಗಿನ ಕೃಷಿ ಪಂಪ್‌ಸೆಟ್ಟುಗಳಿಗೆ ಅನ್ವಯವಾಗುವಂತೆ ಉಚಿತ ವಿದ್ಯುತ್ತನ್ನು ಒದಗಿಸಲಾಗುತ್ತಿದೆ. 10 ಹೆಚ್ ಪಿ ವರೆಗಿನ ಕೃಷಿ ಪಂಪ್ ಸೆಟ್ ರೈತರು ಬಳಸಿದ ವಿದ್ಯುತ್ ಪ್ರಮಾಣಕ್ಕೆ ಸರ್ಕಾರವು ಪ್ರತಿ ತಿಂಗಳು ಸಹಾಯಧನ ವನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಬಿಡುಗಡೆ ಮಾಡುತ್ತಿದೆ.<br>ಸರ್ಕಾರಿ ಆದೇಶ ಸಂಖ್ಯೆ:ಎನರ್ಜಿ 521 ಪಿಎಸ್‌ಆರ್/2021, ಬೆಂಗಳೂರು, ದಿನಾಂಕ 20.07.2022 ರನ್ವಯ ರಾಜ್ಯದಲ್ಲಿನ ಸಣ್ಣ ಮತ್ತು ಮಧ್ಯಮ ಕಾಫಿ ಬೆಳೆಗಾರರ 10 ಹೆಚ್‌ಪಿ ವರೆಗಿನ ನೀರಾವರಿ ಪಂಪ್‌ಸೆಟ್ |

...2

| | | |
|---|---|---|
| | | ಸ್ಥಾವರಗಳ ವಿದ್ಯುತ್ ಶುಲ್ಕವನ್ನು ಹಲವು ಷರತ್ತು/ ನಿಬಂಧನೆಗೊಳಪಟ್ಟು ಫಲಾನುಭವಿಗಳಿಗೆ DBT (ನೇರ ನಗದು ಹಣ ವರ್ಗಾವಣೆ) ಯೋಜನೆಯ ವ್ಯವಸ್ಥೆಯಡಿ ಸರ್ಕಾರದಿಂದ ಮರುಪಾವತಿಸಲು ಆದೇಶಿಸಲಾಗಿದೆ.<br>ಸದರಿ ಯೋಜನೆಗೆ ಅನ್ವಯವಾಗುವ ಮಾನದಂಡಗಳು ಈ ಕೆಳಗಿನಂತಿವೆ.<br>1. ಸಣ್ಣ ಮತ್ತು ಮಧ್ಯಮ ಕಾಫಿ ಬೆಳೆಗಾರರ 10 ಹೆಚ್‌ಪಿ ವರೆಗಿನ ನೀರಾವರಿ ವಿದ್ಯುತ್ ಪಂಪ್ ಸೆಟ್‌ಗಳ ವಿದ್ಯುತ್ ಶುಲ್ಕವನ್ನು ದಿನಾಂಕ: 01.07.2022 ರಿಂದ ಬಳಕೆಯಾಗುವ ವಿದ್ಯುತ್ ಬಳಕೆಗೆ ಅನ್ವಯವಾಗುವಂತೆ ಗ್ರಾಹಕರುಗಳಿಗೆ ಮರು ಪಾವತಿಸಲಾಗುವುದು.<br>2. ಈ ಪ್ರವರ್ಗದ ಫಲಾನುಭವಿ/ಗ್ರಾಹಕರುಗಳು ಸಣ್ಣ ಮತ್ತು ಮಧ್ಯಮ ಕಾಫಿ ಬೆಳೆಗಾರರಾಗಿರುವ ಬಗ್ಗೆ ಸಂಬಂಧಿಸಿದ ಇಲಾಖೆಯಿಂದ ದೃಢೀಕರಣ ಪತ್ರವನ್ನು ಒದಗಿಸತಕ್ಕದ್ದು.<br>3. ಈ ಪ್ರವರ್ಗದ ಗ್ರಾಹಕರುಗಳು ಆಧಾರ್ ಕಾರ್ಡ್, ಬ್ಯಾಂಕ್ ಖಾತೆ ಸಂಖ್ಯೆ(ಖಾತೆಗೆ ಸಂಬಂಧಿಸಿದ ಇತರೆ ಮಾಹಿತಿಗಳನ್ನು ಒದಗಿಸತಕ್ಕದ್ದು) ಹಾಗೂ ಇತರೆ ಮಾಹಿತಿಗಳ ದೃಢೀಕೃತ ದಾಖಲೆಯನ್ನು ಒದಗಿಸುವುದು ಕಡ್ಡಾಯವಾಗಿರುತ್ತದೆ.<br>4. ಈ ಸೌಲಭ್ಯಕ್ಕೆ ಅರ್ಹರಾಗುವ ಬಳಕೆದಾರರು/ಗ್ರಾಹಕರು ಮಾಸಿಕ ವಿದ್ಯುತ್ ಬಿಲ್ಲನ್ನು ಸಂಪೂರ್ಣವಾಗಿ ನಿಗದಿತ ಸಮಯದಲ್ಲಿ ಪಾವತಿಸಿದ ನಂತರ ಸದರಿ ಗ್ರಾಹಕರುಗಳಿಗೆ/ಬಳಕೆದಾರರಿಗೆ DBT ಯೋಜನೆಯ ವ್ಯವಸ್ಥೆಯಡಿ ಸರ್ಕಾರದಿಂದ ವಿದ್ಯುತ್ ಸರಬರಾಜು ಕಂಪನಿಗಳಿಗೆ ಒದಗಿಸುವ ಸಹಾಯಧನವನ್ನು ಮಾಸಿಕ ವಿದ್ಯುತ್ ಬಳಕೆ ಶುಲ್ಕದ ಮೇಲೆ ವಿಧಿಸುವ ವಿದ್ಯುತ್ ತೆರಿಗೆಯನ್ನು ಹೊರತುಪಡಿಸಿ ನೇರವಾಗಿ ಗ್ರಾಹಕರ ಬ್ಯಾಂಕ್ ಖಾತೆಗೆ ಮರುಪಾವತಿಸಲಾಗುವುದು<br>5. ಈ ಪ್ರವರ್ಗದ ಗ್ರಾಹಕರುಗಳ ಒಂದು ಸ್ಥಾವರಕ್ಕೆ ಮಾತ್ರ ಉಚಿತ ವಿದ್ಯುತ್ ಸೌಲಭ್ಯವನ್ನು ಒದಗಿಸಲಾಗುವುದು.<br>ಈ ಯೋಜನೆಯನ್ನು 2022-23ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಕಳೆದ 3 ವರ್ಷಗಳಲ್ಲಿ 10 ಹೆಚ್ ಪಿ ವರೆಗಿನ ಕೃಷಿ ಪಂಪ್ ಸೆಟ್ ರೈತರು ಬಳಸಿದ ವಿದ್ಯುತ್ ಪ್ರಮಾಣ ಮತ್ತು ಸರ್ಕಾರದಿಂದ ಒದಗಿಸಲಾದ ಸಹಾಯಧನದ ಕಂಪನಿವಾರು ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |
| ಈ) | ಕರ್ನಾಟಕದಲ್ಲಿ ಎಲ್ಲಾ ವಿದ್ಯುತ್ ಸಂಪರ್ಕಗಳಿಗೆ ಮೀಟರ್ ಅಳವಡಿಸಿದೆಯೇ; ಶೇಕಡಾ ಎಷ್ಟು; ಮೀಟರ್ ಅಳವಡಿಸಲಾಗಿದೆಯೇ; ಬಾಕಿ ಎಷ್ಟು ಇವೆ; ಯಾವ ಬಳಕೆಯ ಸಂಪರ್ಕಗಳಿಗೆ ಮೀಟರ್ ಅಳವಡಿಸಲು ಬಾಕಿಯಿದೆ; (ವಿವರ ನೀಡುವುದು) | ರಾಜ್ಯದಲ್ಲಿ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ 2022-23 ನೇ ಸಾಲಿನ ಡಿಸೆಂಬರ್-2022 ರ ಅಂತ್ಯಕ್ಕೆ ವಿದ್ಯುತ್ ಸಂಪರ್ಕಗಳಿಗೆ ಮೀಟರ್ ಅಳವಡಿಕೆಯಾಗಿರುವ ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಲಾಗಿದೆ. |

...3

<table>
<tr><td>ಉ)</td><td>ರಾಜ್ಯದಲ್ಲಿ ವಿದ್ಯುತ್ ಪ್ರಸರಣ ಮತ್ತು ವಿತರಣ ನಷ್ಟದ ಪ್ರಮಾಣ ಎಷ್ಟು; ಅದನ್ನು ಕಡಿಮೆ ಮಾಡಲು ಸರ್ಕಾರ ಏನು ಕ್ರಮ ವಹಿಸಿದೆ; (ವಿವರ ನೀಡುವುದು)</td><td>ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಕ.ವಿ.ಪ್ರ.ನಿ.ನಿ. ಪ್ರಸರಣ ನಷ್ಟದ ಶೇಕಡವಾರು ವಿವರಗಳು ಕೆಳಕಂಡಂತಿದೆ:-<br><table><tr><th rowspan="2">ವಿವರ</th><th colspan="3">ಪ್ರಸರಣ ನಷ್ಟ %</th></tr><tr><th>2019-20</th><th>2020-21</th><th>2021-22</th></tr><tr><td>ಕವಿಪ್ರನಿನಿ</td><td>3.129</td><td>3.025</td><td>2.987</td></tr></table><br>ಕಳೆದ 3 ವರ್ಷಗಳಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ವಿತರಣ ನಷ್ಟದ ಶೇಕಡವಾರು ವಿವರಗಳು ಕೆಳಕಂಡಂತಿವೆ:-<br><table><tr><th rowspan="2">ಕಂಪನಿ ಹೆಸರು</th><th colspan="3">ವಿತರಣ ನಷ್ಟ %</th></tr><tr><th>2019-20</th><th>2020-21</th><th>2021-22</th></tr><tr><td>ಬೆಸ್ಕಾಂ</td><td>12.49</td><td>11.06</td><td>11.23</td></tr><tr><td>ಮೆಸ್ಕಾಂ</td><td>10.07</td><td>9.86</td><td>9.02</td></tr><tr><td>ಸೆಸ್ಕ್</td><td>11.12</td><td>12.75</td><td>10.40</td></tr><tr><td>ಹೆಸ್ಕಾಂ</td><td>14.10</td><td>13.25</td><td>13.50</td></tr><tr><td>ಜೆಸ್ಕಾಂ</td><td>11.22</td><td>11.72</td><td>10.54</td></tr></table><br>ಕ.ವಿ.ಪ್ರ.ನಿ.ನಿ. ಮತ್ತು ವಿವಿಧ ವಿದ್ಯುತ್ ಸರಬರಾಜು ಕಂಪನಿಗಳು ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿ/ಯೋಜನೆಗಳ ಮೂಲಕ ಶೇಕಡಾವಾರು ಪ್ರಸರಣ ಮತ್ತು ವಿತರಣ ನಷ್ಟವು ಕಡಿಮೆಯಾಗಿರುತ್ತದೆ.</td></tr>
<tr><td>ಊ)</td><td>ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಪ್ರಸರಣ ಮತ್ತು ವಿತರಣ ವ್ಯವಸ್ಥೆಯ ನಿರ್ವಹಣೆಯನ್ನು ಸರ್ಕಾರ ಮಾಡುತ್ತಿದೆಯೇ; ಅಥವಾ ಹೊರಗುತ್ತಿಗೆ ನೀಡುತ್ತಿದೆಯೇ; (ಸಂಪೂರ್ಣ ವಿವರ ನೀಡುವುದು)</td><td>ರಾಜ್ಯದಲ್ಲಿ ವಿದ್ಯುತ್ ಪ್ರಸರಣ ವ್ಯವಸ್ಥೆಯ ನಿರ್ವಹಣೆಯಲ್ಲಿ ವಿದ್ಯುತ್ ಉಪಕೇಂದ್ರಗಳ ನಿರ್ವಹಣೆಯನ್ನು ಕವಿಪ್ರನಿನಿ ಮತ್ತು ಹೊರಗುತ್ತಿಗೆ ಆಧಾರದಲ್ಲಿ ನಿರ್ವಹಿಸುತ್ತಿದ್ದು, ಪ್ರಸರಣ ಮಾರ್ಗಗಳಲ್ಲಿ 400ಕೆವಿ ಪಿಜಿಸಿಐಎಲ್ ಮಾರ್ಗಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಪ್ರಸರಣ ಮಾರ್ಗಗಳನ್ನು ಕವಿಪ್ರನಿನಿ ವತಿಯಿಂದ ನಿರ್ವಹಿಸಲಾಗುತ್ತಿದೆ.<br>ವಿದ್ಯುತ್ ವಿತರಣ ವ್ಯವಸ್ಥೆಯ ನಿರ್ವಹಣೆಯನ್ನು ವಿದ್ಯುತ್ ಸರಬರಾಜು ಕಂಪನಿಗಳ ವತಿಯಿಂದ ನಿರ್ವಹಿಸಲಾಗುತ್ತಿದೆ.</td></tr>
<tr><td>ಋ)</td><td>ಸಾರ್ವಜನಿಕರಿಗೆ ಸೌರ ವಿದ್ಯುತ್ ಬಳಕೆ ಉತ್ತೇಜಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು).</td><td>ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಸೌರಶಕ್ತಿ ಮೇಲ್ಛಾವಣಿ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು, ಈ ಬಗ್ಗೆ ಸಾರ್ವಜನಿಕರಿಗೆ / ವಿದ್ಯುತ್ ಗ್ರಾಹಕರಿಗೆ ಅರಿವು ಮೂಡಿಸುವ ಸಲುವಾಗಿ ಸೌರ ವಿದ್ಯುತ್ ಮೇಲ್ಛಾವಣಿ ಘಟಕಗಳನ್ನು ಸ್ಥಾಪಿಸಲು ಆನ್ ಲೈನ್ ಪೋರ್ಟಲ್ ಮುಖಾಂತರ ಅರ್ಜಿ ಸಲ್ಲಿಸಲು ಅನುಕೂಲ ಮಾಡಿಕೊಡಲಾಗಿದ್ದು. ಈ ಕುರಿತು ದಿನ ಪತ್ರಿಕೆ / ಮಾಧ್ಯಮಗಳಲ್ಲಿ ಪ್ರಚಾರ ಮಾಡಲಾಗಿರುತ್ತದೆ.<br>ವಿದ್ಯುತ್ ಗ್ರಾಹಕರು ಆನ್ ಲೈನ್ ಮುಖಾಂತರ ಮಂಜೂರಾದ ವಿದ್ಯುತ್ ಸಂಪರ್ಕ ಲೋಡ್ ಗೆ ಅನುಗುಣವಾಗಿ ನಿವ್ವಳ ಮಿಟರಿಂಗ್ (ನೆಟ್ ಮಿಟರಿಂಗ್) ಅಳವಡಿಸಿಕೊಂಡು ಸೌರ ವಿದ್ಯುತ್ ಮೇಲ್ಛಾವಣಿ ಘಟಕಗಳನ್ನು ಸ್ಥಾಪಿಸಬಹುದಾಗಿದೆ.</td></tr>
</table>

| | | |
|---|---|---|
| | | ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಇಲಾಖೆಯು ನವೀಕರಿಸಬಹುದಾದ ಮೂಲಗಳಿಂದ ವಿದ್ಯುತ್ ಉತ್ಪಾದಿಸಲು ಪ್ರಾಮುಖ್ಯತೆ ಯನ್ನು ನೀಡುತ್ತಿದೆ. ಇದಕ್ಕಾಗಿ MNRE Phase-II Rooftop Solar ಯೋಜನೆಯನ್ನು ಜಾರಿಗೆ ತಂದಿದೆ.<br>ಸದರಿ ಯೋಜನೆಯಡಿಯಲ್ಲಿ ಗೃಹ ಬಳಕೆಯ ಸ್ಥಾವರಗಳ ಮೇಲ್ಛಾವಣಿಗಳ ಮೇಲೆ ಸೋಲಾರ್ ಘಟಕ ಗಳನ್ನು ಅಳವಡಿಸುವ ಗ್ರಾಹಕರ ನಿಗದಿತ ವೆಚ್ಚದ ಮೇಲೆ ಶೇ 40 ರಿಂದ ಶೇ 20 ರಷ್ಟು ಸಹಾಯಧನವನ್ನು (ಸಬ್ಸಿಡಿ) ಕೇಂದ್ರ ಸರ್ಕಾರದಿಂದ ನೀಡಲಾಗುತ್ತಿದ್ದು ವಿವರಗಳು ಕೆಳಕಂಡಂತಿವೆ.<br>1) 1 ರಿಂದ 3 KWp ವರೆಗೆ ಕೇಂದ್ರ ಸರ್ಕಾರದಿಂದ 40% ಸಹಾಯಧನ ನೀಡಲಾಗುವುದು ಮತ್ತು<br>2) 4 ರಿಂದ 10 KWp ವರೆಗೆ 20% ಸಹಾಯಧನ ನೀಡಲಾಗುವುದು.<br>3) ವಸತಿ ಸಂಕೀರ್ಣಗಳ (ಅಪಾರ್ಟಮೆಂಟ್), ವಸತಿ ಸಮುಚ್ಚಯಗಳ ಮೇಲ್ಛಾವಣಿಗಳ ಮೇಲೆ ಸ್ಥಾಪಿಸಿದ ಸೋಲಾರ ಘಟಕಗಳಿಗೆ ಶೇ 20 ರಷ್ಟು ಸಹಾಯಧನ ದೊರೆಯುತ್ತದೆ. |

ಸಂಖ್ಯೆ: ಎನರ್ಜಿ 48 ಇಬಿಎಸ್ 2023

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 546 ಕ್ಕೆ ಅನುಬಂಧ-1**

ರಾಜ್ಯದಲ್ಲಿ 2019-20 ರಿಂದ 2022-23 ರ ಜನವರಿ-2023 ರ ಅಂತ್ಯದವರೆಗೆ ವಿವಿಧ ಮೂಲಗಳಿಂದ ಲಭ್ಯವಾದ ವಿದ್ಯುತ್ತಿನ ಪ್ರಮಾಣದ ವಿವರಗಳು ಕೆಳಕಂಡಂತಿವೆ:-

| ವಿದ್ಯುತ್ತಿನ ಮೂಲ | 2019-20 ನೇ ಸಾಲಿನಲ್ಲಿ ಲಭ್ಯವಾದ ವಿದ್ಯುತ್ತಿನ ಪ್ರಮಾಣ (ದ.ಲ.ಯೂ) | 2020-21 ನೇ ಸಾಲಿನಲ್ಲಿ ಲಭ್ಯವಾದ ವಿದ್ಯುತ್ತಿನ ಪ್ರಮಾಣ (ದ.ಲ.ಯೂ | 2021-22 ನೇ ಸಾಲಿನಲ್ಲಿ ಲಭ್ಯವಾದ ವಿದ್ಯುತ್ತಿನ ಪ್ರಮಾಣ (ದ.ಲ.ಯೂ.) | 2022-23ನೇ ಸಾಲಿನಲ್ಲಿ (ಏಪ್ರಿಲ್-2022 ರಿಂದ ಜನವರಿ-2023 ರ ಅಂತ್ಯದವರೆಗೆ ) ಲಭ್ಯವಾದ ವಿದ್ಯುತ್ತಿನ ಪ್ರಮಾಣ (ದ.ಲ.ಯೂ.) (ತಾತ್ಕಾಲಿಕ) |
|---|---|---|---|---|
| ಜಲ ವಿದ್ಯುತ್ | 13805.98 | 12560.86 | 13740.09 | 11247.27 |
| ಶಾಖೋತ್ಪನ್ನ | 11845.10 | 9491.86 | 17143.42 | 13129.51 |
| ಕೇಂದ್ರ ಸರ್ಕಾರ ಸ್ವಾಮ್ಯದ ವಿದ್ಯುತ್ ಉತ್ಪಾದನಾ ಘಟಕಗಳಿಂದ ರಾಜ್ಯದ ಪಾಲು | 17880.55 | 18781.71 | 13973.62 | 13153.79 |
| ಅಸಂಪ್ರದಾಯಿಕ ಮೂಲಗಳಿಂದ | 27934.32 | 27776.89 | 28628.58 | 23727.34 |
| ಬೃಹತ್ ಐ.ಪಿ.ಪಿ. | 3032.11 | 2158.94 | 1560.44 | 630.80 |
| ಜಿಂದಾಲ್ | 630.81 | 501.42 | 630.95 | 798.83 |
| **ಒಟ್ಟು** | **75128.87** | **71271.69** | **75677.11** | **62687.54** |

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 546 ಕ್ಕೆ ಅನುಬಂಧ-2

ರಾಜ್ಯದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಳೆದ 3 ವರ್ಷಗಳಲ್ಲಿ 10 ಹೆಚ್ ಪಿ ವರೆಗಿನ ಕೃಷಿ ಪಂಪ್ ಸೆಟ್ ಗಳ ರೈತರು ಉಚಿತ ವಿದ್ಯುತ್ ಬಳಸಿದ ವಿದ್ಯುತ್ ಪ್ರಮಾಣ ಮತ್ತು ಸರ್ಕಾರದಿಂದ ಒದಗಿಸಲಾದ ಸಹಾಯಧನದ ವಿವರಗಳು ಕೆಳಕಂಡಂತಿವೆ.

## ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ

| ವರ್ಷ | ಬಳಕೆ (ಎಂ.ಯೂ) | ಸರ್ಕಾರದಿಂದ ಬಿಡುಗಡೆಗೊಳಿಸಿರುವ ಸಹಾಯಧನ (ರೂ. ಕೋಟಿಗಳಲ್ಲಿ) |
|---|---|---|
| 2019-20 | 6916.36 | 2434.57 |
| 2020-21 | 6910.2 | 2554.26 |
| 2021-22 | 6351.44 | 4099.26 (1500.00 ಹಿಂದಿನ ವರ್ಷಗಳ ಬಾಕಿ ಒಳಗೊಂಡಂತೆ) |
| 2022-23 (ಡಿಸೆಂಬರ್ ಅಂತ್ಯದವರೆಗೆ) | 3905.93 | 1843.42 |

## ಮಂಗಳೂರು ವಿದ್ಯುತ್ ಸರಬರಾಜು ಕಂಪನಿ

| ವರ್ಷ | ಬಳಕೆ (ಎಂ.ಯೂ) | ಸರ್ಕಾರದಿಂದ ಬಿಡುಗಡೆಗೊಳಿಸಿರುವ ಸಹಾಯಧನ (ರೂ. ಕೋಟಿಗಳಲ್ಲಿ) |
|---|---|---|
| 2019-20 | 1728.92 | 868.38 |
| 2020-21 | 1685.25 | 852.54 |
| 2021-22 | 1492.00 | 1469.90 (500.00 ಹಿಂದಿನ ವರ್ಷಗಳ ಬಾಕಿ ಒಳಗೊಂಡಂತೆ) |
| 2022-23 (ಡಿಸೆಂಬರ್ ಅಂತ್ಯದವರೆಗೆ) | 919.12 | 612.95 |

## ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ

| ವರ್ಷ | ಬಳಕೆ (ಎಂ.ಯೂ) | ಸರ್ಕಾರದಿಂದ ಬಿಡುಗಡೆಗೊಳಿಸಿರುವ ಸಹಾಯಧನ (ರೂ. ಕೋಟಿಗಳಲ್ಲಿ) |
|---|---|---|
| 2019-20 | 2934.98 | 1364.07 |
| 2020-21 | 2948.86 | 1479.79 |
| 2021-22 | 2971.38 | 2986.13 (1350.00 ಹಿಂದಿನ ವರ್ಷಗಳ ಬಾಕಿ ಒಳಗೊಂಡಂತೆ) |
| 2022-23 (ಡಿಸೆಂಬರ್ ಅಂತ್ಯದವರೆಗೆ) | 1657.44 | 1302.89 |

## ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ

| ವರ್ಷ | ಬಳಕೆ (ಎಂ.ಯೂ) | ಸರ್ಕಾರದಿಂದ ಬಿಡುಗಡೆಗೊಳಿಸಿರುವ ಸಹಾಯಧನ (ರೂ. ಕೋಟಿಗಳಲ್ಲಿ) |
|---|---|---|
| 2019-20 | 5985.90 | 4174.07 |
| 2020-21 | 5938.82 | 4080.13 |
| 2021-22 | 6603.46 | 7349.10 (3492.58 ಹಿಂದಿನ ವರ್ಷಗಳ ಬಾಕಿ ಒಳಗೊಂಡಂತೆ) |
| 2022-23 (ಡಿಸೆಂಬರ್ ಅಂತ್ಯದವರೆಗೆ) | 4434.29 | 2883.96 |

## ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ

| ವರ್ಷ | ಬಳಕೆ (ಎಂ.ಯೂ) | ಸರ್ಕಾರದಿಂದ ಬಿಡುಗಡೆಗೊಳಿಸಿರುವ ಸಹಾಯಧನ (ರೂ. ಕೋಟಿಗಳಲ್ಲಿ) |
|---|---|---|
| 2019-20 | 3054.00 | 1902.37 |
| 2020-21 | 3041.47 | 1709.97 |
| 2021-22 | 3497.60 | 2940.39 (1221.73 ಹಿಂದಿನ ವರ್ಷಗಳ ಬಾಕಿ ಒಳಗೊಂಡಂತೆ) |
| 2022-23 (ಡಿಸೆಂಬರ್ ಅಂತ್ಯದವರೆಗೆ) | 2345.83 | 1322.22 |

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 546 ಕ್ಕೆ ಅನುಬಂಧ-3

ರಾಜ್ಯದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ 2022-23 ನೇ ಸಾಲಿನ ಡಿಸೆಂಬರ್-2022 ರ ಅಂತ್ಯಕ್ಕೆ ವಿದ್ಯುತ್ ಸಂಪರ್ಕಗಳಿಗೆ ಮೀಟರ್ ಅಳವಡಿಕೆಯಾಗಿರುವ ವಿವರಗಳು ಕೆಳಕಂಡಂತಿವೆ.

### ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

| ಕ್ರ.ಸಂ | ಪ್ರವರ್ಗ | ಮೀಟರ್ ಅಳವಡಿಸಿರುವ ಸ್ಥಾವರಗಳ ಸಂಖ್ಯೆ | ಮೀಟರ್ ಅಳವಡಿಸಲು ಬಾಕಿ ಇರುವ ಸ್ಥಾವರಗಳ ಸಂಖ್ಯೆ | ಒಟ್ಟು ಸಕ್ರಿಯ ಸ್ಥಾವರಗಳ ಸಂಖ್ಯೆ | ಶೇಕಡಾವಾರು ಮೀಟರ್ ಅಳವಡಿಕೆ |
|---|---|---|---|---|---|
| 1 | ಹೆಚ್.ಟಿ | 17137 | 0 | 17137 | 100% |
| 2 | ಭಾಗ್ಯ ಜ್ಯೋತಿ ಮತ್ತು | 628252 | 0 | 628252 | 100% |
| 3 | ಗೃಹ ಬಳಕೆ | 8147858 | 0 | 8147858 | 100% |
| 4 | ವಾಣಿಜ್ಯ | 1074922 | 0 | 1074922 | 100% |
| 5 | ಕೃಷಿ | 1665 | 959104 | 960769 | 0.17% |
| 6 | ಕೈಗಾರಿಕೆ | 169509 | 0 | 169509 | 100% |
| 7 | ನೀರು ಸರಬರಾಜು | 72599 | 0 | 72599 | 100% |
| 8 | ಬೀದಿ ದೀಪ | 73718 | 0 | 73718 | 100% |
| 9 | ಇ.ವಿ. ಚಾರ್ಜಿಂಗ್ | 221 | 0 | 221 | 100% |
| 10 | ತಾತ್ಕಾಲಿಕ | 102485 | 0 | 102485 | 100% |
| **ಒಟ್ಟು** | | **10288366** | **959104** | **11247470** | **91.47%** |

### ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

| ಕ್ರ.ಸಂ | ಪ್ರವರ್ಗ | ಮೀಟರ್ ಅಳವಡಿಸಿದ ಸ್ಥಾವರಗಳು | ಮೀಟರ್ ಅಳವಡಿಸದೇ ಇರುವ ಸ್ಥಾವರಗಳು | ಒಟ್ಟು ಸಕ್ರಿಯ ಸ್ಥಾವರಗಳ ಸಂಖ್ಯೆ | ಶೇಕಡಾವಾರು ಮೀಟರ್ ಅಳವಡಿಕೆ |
|---|---|---|---|---|---|
| 1 | ಗೃಹ ಬಳಕೆ | 1869519 | 0 | 1869519 | 100.00% |
| 2 | ವಾಣಿಜ್ಯ | 242758 | 0 | 242758 | 100.00% |
| 3 | ಕೃಷಿ | 299724 | 94414 | 394138 | 76.05% |
| 4 | ಕೈಗಾರಿಕೆ | 37547 | 0 | 37547 | 100.00% |
| 5 | ನೀರು ಸರಬರಾಜು | 18076 | 0 | 18076 | 100.00% |
| 6 | ಬೀದಿ ದೀಪ | 29082 | 0 | 29082 | 100.00% |
| 7 | ತಾತ್ಕಾಲಿಕ | 22123 | 0 | 22123 | 100.00% |
| **ಒಟ್ಟು** | | **2503607** | **94414** | **2613243** | **96.37%** |

...2

**ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ**

| ಕ್ರ.ಸಂ | ಪ್ರವರ್ಗ | ಮೀಟರ್ ಹೊಂದಿರುವ ಸ್ಥಾವರಗಳು | ಮೀಟರ್ ಅಳವಡಿಸಲು ಬಾಕಿ ಇರುವ ಸ್ಥಾವರಗಳು | ಒಟ್ಟು ಸಕ್ರಿಯ ಸ್ಥಾವರಗಳ ಸಂಖ್ಯೆ | ಶೇಕಡಾವಾರು ಮಾಪಕ ಅಳವಡಿಕೆ |
|---|---|---|---|---|---|
| 1 | ಗೃಹ ಬಳಕೆ | 2704271 | 0 | 2704271 | 100.00% |
| 2 | ವಾಣಿಜ್ಯ | 295997 | 0 | 295997 | 100.00% |
| 3 | ಕೃಷಿ | 10831 | 461818 | 472649 | 2.29% |
| 4 | ಕೈಗಾರಿಕೆ | 51515 | 0 | 51515 | 100.00% |
| 5 | ನೀರು ಸರಬರಾಜು | 32332 | 0 | 32332 | 100.00% |
| 6 | ಬೀದಿ ದೀಪ | 27510 | 0 | 27510 | 100.00% |
| 7 | ತಾತ್ಕಾಲಿಕ | 99046 | 0 | 99046 | 100.00% |
| 8 | ಇತರೆ | 626 | 0 | 626 | 100.00% |
| | ಒಟ್ಟು | **3222128** | **461818** | **3683946** | **87.46%** |

**ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ**

| ಕ್ರ.ಸಂ | ಪ್ರವರ್ಗ | ಮೀಟರ್ ಅಳವಡಿಸಿದ ಸ್ಥಾವರಗಳು | ಮೀಟರ್ ಅಳವಡಿಸದೇ ಇರುವ ಸ್ಥಾವರಗಳು | ಒಟ್ಟು ಸಕ್ರಿಯ ಸ್ಥಾವರಗಳ ಸಂಖ್ಯೆ | ಶೇಕಡಾವಾರು ಮೀಟರ್ ಅಳವಡಿಕೆ |
|---|---|---|---|---|---|
| 1 | ಗೃಹ ಬಳಕೆ | 3916074 | 2885 | 3918959 | 99.93% |
| 2 | ವಾಣಿಜ್ಯ | 452570 | 0 | 452570 | 100.00% |
| 3 | ಕೃಷಿ | 165843 | 846942 | 1012785 | 16.37% |
| 4 | ಕೈಗಾರಿಕೆ | 138314 | 0 | 138314 | 100.00% |
| 5 | ನೀರು ಸರಬರಾಜು | 55632 | 0 | 55632 | 100.00% |
| 6 | ಬೀದಿ ದೀಪ | 29453 | 0 | 29453 | 100.00% |
| 7 | ತಾತ್ಕಾಲಿಕ | 208721 | 0 | 208721 | 100.00% |
| | ಒಟ್ಟು | **4966607** | **849827** | **5816434** | **85.39%** |

**ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ**

| ಕ್ರ.ಸಂ | ಪ್ರವರ್ಗ | ಮೀಟರ್ ಅಳವಡಿಸಿದ ಸ್ಥಾವರಗಳು | ಮೀಟರ್ ಅಳವಡಿಸಲು ಬಾಕಿ ಇರುವ ಸ್ಥಾವರಗಳು | ಒಟ್ಟು ಸಕ್ರಿಯ ಸ್ಥಾವರಗಳ ಸಂಖ್ಯೆ | ಶೇಕಡಾವಾರು ಮೀಟರ್ ಅಳವಡಿಕೆ |
|---|---|---|---|---|---|
| 1 | ಗೃಹ ಬಳಕೆ | 2619765 | 0 | 2619765 | 100.00% |
| 2 | ವಾಣಿಜ್ಯ | 324491 | 0 | 324491 | 100.00% |
| 3 | ಕೃಷಿ | 3376 | 421585 | 424961 | 0.79% |
| 4 | ಕೈಗಾರಿಕೆ | 75237 | 0 | 75237 | 100.00% |
| 5 | ನೀರು ಸರಬರಾಜು | 27339 | 1860 | 29199 | 93.63% |
| 6 | ಬೀದಿ ದೀಪ | 16736 | 841 | 17577 | 95.22% |
| 7 | ತಾತ್ಕಾಲಿಕ | 52536 | 0 | 52536 | 100.00% |
| | ಒಟ್ಟು | **3119480** | **424286** | **3543766** | **88.03%** |